**ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್.ರವಿಕುಮಾರ್, ಮಾನ್ಯ ಶಾಸಕರುಗಳಾದ ಶ್ರೀ ಶಾಂತಾರಾಂ ಬುಡ್ನ ಸಿದ್ದಿ, ಡಾ:ತಳವಾರ್ ಸಾಬಣ್ಣ, ಶ್ರೀ ಪ್ರತಾಪ ಸಿಂಹ ನಾಯಕ ಹಾಗೂ ಶ್ರೀ ಮುನಿರಾಜು ಗೌಡ ಪಿ.ಎಂ, ಇವರುಗಳು ನೀಡಿರುವ ನಿಯಮ 72ರ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ**

ಪ್ರಶ್ನೆ: ರಾಜ್ಯದಲ್ಲಿ ಇತ್ತೀಚೆಗೆ ಕೊಲೆ, ಕೋಮುಗಲಭೆ, ಅತ್ಯಾಚಾರ, ಅಪರಾಧ ಕೃತ್ಯಗಳು ಮತ್ತು ಮಾರಣಾಂತಿಕ ಹಲ್ಲೆಯಂತಹ ಘಟನೆಗಳು ಪದೇ ಪದೇ ಮರುಕಳಿಸುತ್ತಿವೆ. ಈ ಘಟನೆಗಳು ಪೂರ್ವನಿಯೋಜಿತ ಕೃತ್ಯಗಳಾಗಿದ್ದು, ನಿರ್ಧಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ದೌರ್ಜನ್ಯ ಎಸಗಲಾಗುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ನಡೆದ ನೈತಿಕ ಪೊಲೀಸ್ ಗಿರಿ ಮತ್ತು ಮಹಿಳೆಯ ಗ್ಯಾಂಗ್‌ರೇಪ್ ಪ್ರಕರಣ ಮತ್ತು ಬೆಳಗಾವಿಯ ವಂಟಮುರಿಯಲ್ಲಿ ದಲಿತ ಮಹಿಳೆಯನ್ನು ವಿವಸ್ತ್ರಗೊಳಿಸಿ ಮರಕ್ಕೆ ಕಟ್ಟಿ ಹಲ್ಲೆ ಮಾಡಿದ ಪ್ರಕರಣ ಜನರ ಭಾವನೆ ಕೆರಳುವಂತೆ ಮಾಡಿದೆ. ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಸೈಬರ್ ಕ್ರೈಂ, ಅಪರಾಧ ಕೃತ್ಯಗಳು ವಿಪರೀತ ಹೆಚ್ಚಳವಾಗಿದೆ. ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆಯುತ್ತಿರುವ ಈ ರೀತಿಯ ಘಟನೆಗಳಿಗೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಿದ್ದು, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿರುವ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿರುವ ಕುರಿತು.

ಉತ್ತರ:

ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯು ಸಮರ್ಥವಾಗಿದ್ದು, ಪ್ರತಿದಿನ ಸಮಾಜದ ವ್ಯವಸ್ಥೆಯಲ್ಲಿ ವರದಿಯಾಗುತ್ತಿರುವ ಎಲ್ಲಾ ರೀತಿಯ ಅಪರಾಧಗಳನ್ನು ತಡೆಗಟ್ಟಲು ಮತ್ತು ಪತ್ತೆ ಮಾಡುವ ಕಾರ್ಯವನ್ನು ಅತ್ಯಂತ ಸೂಕ್ತ ರೀತಿಯಲ್ಲಿ ಕ್ರಮಕೈಗೊಂಡು ಕಾರ್ಯನಿರ್ವಹಿಸುತ್ತಿದೆ.

| ವರ್ಷವಾರು ದಾಖಲಾದ ಪ್ರಕರಣ | ಕೊಲೆ | ಕೋಮು ಗಲಭೆ | ಮಾರಣಾಂತಿಕ ಹಲ್ಲೆ | ಸೈಬರ್ ಕ್ರೈಂ | ಅತ್ಯಾಚಾರ | | | ಸಾಮೂಹಿಕ ಅತ್ಯಾಚಾರ | ಸಾಮಾನ್ಯ ಐಪಿಸಿ |
|---|---|---|---|---|---|---|---|---|---|
| | | | | | | C-Rep | B-Rep | | |
| **2020** | 1318 | 5 | 2356 | 10757 | 479 | 3 | 26 | 7 | 150206 |
| **2021** | 1343 | 8 | 2444 | 8143 | 556 | 4 | 27 | 14 | 163815 |
| **2022** | 1370 | 13 | 2830 | 12551 | 538 | 1 | 46 | 12 | 180787 |
| **2023 (31.05.2023** ರವರೆಗೆ) | 542 | 0 | 1088 | 7598 | 222 | 0 | 10 | 2 | 82863 |

| ವರ್ಷವಾರು ದಾಖಲಾದ ಪ್ರಕರಣ | ಕೊಲೆ | ಕೋಮು ಗಲಭೆ | ಮಾರಣಾಂತಿಕ ಹಲ್ಲೆ | ಸೈಬರ್ ಕ್ರೈಂ | ಅತ್ಯಾಚಾರ | | | | ಸಾಮೂಹಿಕ ಅತ್ಯಾಚಾರ | ಸಾಮಾನ್ಯ ಐಪಿಸಿ |
|---|---|---|---|---|---|---|---|---|---|---|
| | | | | | | B-Rep | C-Rep | Detected | | |
| **01.06.2023 ರಿಂದ 31.01.2024ರವರೆಗೆ** | 836 | 5 | 1980 | 16187 | 436 | 17 | 0 | 247 | 8 | 147860 |

ಮೇಲ್ಕಂಡ ಅಪರಾಧಗಳನ್ನು ತಡೆಗಟ್ಟುವಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಮುಖ ಪಾತ್ರವನ್ನು ವಹಿಸಿ ತಮ್ಮ ಅಧೀನದ ಪೊಲೀಸ್ ಅಧಿಕಾರಿ ಮತ್ತು ಪೊಲೀಸ್ ಸಿಬ್ಬಂದಿಯವರುಗಳಿಗೆ ಸೂಕ್ತ ಕ್ರಮವನ್ನು ವಹಿಸಲು ಅಗತ್ಯ ನಿರ್ದೇಶನಗಳನ್ನು ನೀಡಿರುತ್ತಾರೆ.

ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಕ್ರಮವಹಿಸಲು ರಾಜ್ಯದ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಎಲ್ಲಾ ಅಧಿಕಾರಿ/ಸಿಬ್ಬಂದಿಯವರುಗಳಿಗೆ ಸೂಚಿಸಲಾಗಿದ್ದು, ಸಮರ್ಪಕವಾಗಿ ಕಾರ್ಯನಿರ್ವಹಿಸಲು ಪೊಲೀಸ್ ಇಲಾಖೆಯು ಸಮರ್ಥವಾಗಿದ್ದು ನಿರಂತರವಾಗಿ ಅಪರಾಧಗಳನ್ನು ತಡೆಗಟ್ಟುವ ಕಾರ್ಯಚರಣೆಗೆ ಅವಿರತವಾಗಿ ಶ್ರಮವಹಿಸುತ್ತಿದೆ.

## ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳು

- ಅಪರಾಧಗಳನ್ನು ತಡೆಯಲು ಬೀಟ್ ಅನ್ನು ನಿರ್ವಹಿಸಲಾಗುತ್ತಿದ್ದು, ರಾತ್ರಿ ಗಸ್ತಿಗಾಗಿ ಇ-ಬೀಟ್ ಬಳಸಿ ಹಿಂದೆಂದಿಗಿಂತ ಅತ್ಯಂತ ಸಮರ್ಪಕವಾಗಿ ರಾತ್ರಿ ಪಾಳಿಯಲ್ಲಿ ಪೊಲೀಸ್ ತಂಡಗಳು ಕಾರ್ಯನಿರ್ವಹಿಸುತ್ತಿವೆ.
- ರಾತ್ರಿ ಹೊತ್ತಿನಲ್ಲಿ ಸಂಶಯಾಸ್ಪದ ವ್ಯಕ್ತಿಗಳ ಬೆರಳು ಮುದ್ರೆಗಳನ್ನು ಎಂ-ಸಿಸಿಟಿಎನ್‌ಎಸ್ ಆ್ಯಪ್ ಮೂಲಕ ಮಾಡಿ, ಮುಂಜಾಗ್ರತೆ ವಹಿಸಲಾಗುತ್ತಿದೆ.
- ಹಬ್ಬ-ಹರಿದಿನಗಳ ಸಂದರ್ಭಗಳಲ್ಲಿ ಹೆಚ್ಚಿನ ಅಪರಾಧ ಪತ್ತೆಗೆ ಸಿಬ್ಬಂದಿಗಳನ್ನು ನಿಯೋಜನೆ ಮಾಡಿ, ದೇವಸ್ಥಾನ-ಜಾತ್ರೆಗಳಲ್ಲಿ ಸ್ವತ್ತಿನ ಅಪರಾಧಗಳನ್ನು ತಡೆಯಲಾಗುತ್ತಿದೆ.
- ಈಗಾಗಲೇ ಅಪರಾಧಗಳಲ್ಲಿ ಭಾಗಿಯಾಗಿರುವ ಆರೋಪಿಗಳ ವಿರುದ್ಧ ರೌಡಿಶೀಟ್, ಎಂ.ಓ.ಬಿ. ಕಾರ್ಡ್‌ಗಳನ್ನು ತೆರೆದು ಅವರ ಮೇಲೆ ಮುಂಜಾಗ್ರತಾ ಕಾನೂನು ಕ್ರಮಗಳನ್ನು ಜರುಗಿಸಿ ಶಾಂತಿ ಪಾಲನೆ ಮಾಡಲು ಕ್ರಮ ವಹಿಸಲಾಗುತ್ತಿದೆ.
- ಜೈಲಿನಿಂದ ಹೊರಬರುತ್ತಿರುವ ಆರೋಪಿಗಳ ಮೇಲೆ ನಿಗಾವಹಿಸಲಾಗುತ್ತಿದೆ.
- ಠಾಣಾ ಮಟ್ಟದಲ್ಲಿ ನಿಯಮಿತವಾಗಿ ರೌಡಿ ಪರೇಡ್ ಹಾಗೂ ಎಂ.ಓ.ಬಿ ಪರೇಡ್ ಮಾಡಿ ಅಂತಹ ಆಸಾಮಿಗಳಿಗೆ ನ್ಯಾಯಯುತವಾಗಿ ಬದುಕಲು ಎಚ್ಚರ ನೀಡಲಾಗುತ್ತಿದೆ.
- ರಾತ್ರಿ ಗಸ್ತಿನಲ್ಲಿ ಅಪರಾಧಿಕ ಪ್ರವೃತ್ತಿಯುಳ್ಳ ಆಸಾಮಿಗಳ ಬಗ್ಗೆ ಮಾಹಿತಿ ಪಡೆದು ಅವರ ಮೇಲೆ ನಿಗಾ ವಹಿಸಲಾಗುತ್ತಿದೆ.
- ಗ್ರಾಮಗಳಲ್ಲಿ ಜರುಗಬಹುದಾದ ವ್ಯಾಜ್ಯಗಳ ಕುರಿತು ಮುಂಗಡ ಮಾಹಿತಿ ಪಡೆದು ಸಂಬಂಧಿಸಿದವರ ಮೇಲೆ ಮುಂಜಾಗ್ರತ ಕ್ರಮ ಜರುಗಿಸಿ ಗಲಾಟೆ ಹೊಡೆದಾಟಗಳನ್ನು ತಪ್ಪಿಸಲಾಗುತ್ತಿದೆ.
- ಎಲ್ಲಾ ಜಿಲ್ಲೆಗಳಿಗೆ ಸಮರ್ಪಕವಾಗಿ ಇಆರ್‌ಎಸ್‌ಎಸ್-112 ವಾಹನಗಳನ್ನು ನೀಡಲಾಗಿದ್ದು, ಸಾರ್ವಜನಿಕರು ಕರೆ ಮಾಡಿದ ಕೆಲವೇ ನಿಮಿಷಗಳಲ್ಲಿ ಪೊಲೀಸ್ ಸಹಾಯ ನೀಡಿ ಯಾವುದೇ ಅಪರಾಧಗಳು ಜರುಗುವುದನ್ನು ತಪ್ಪಿಸಲಾಗುತ್ತಿದೆ. ಅಪರಾಧ ಜರುಗಿದ್ದೇ ಆದಲ್ಲಿ ಶೀಘ್ರ ಕ್ರಮ ಜರುಗಿಸಲಾಗುತ್ತಿದೆ.
- ನಿರಂತರವಾಗಿ ಮಟ್ಕಾ, ಜೂಜಾಟ, ಅಕ್ರಮ ಮದ್ಯ ಮಾರಾಟದ ವಿರುದ್ಧ ದಾಳಿ ನಡೆಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

- ಅಪರಾಧ ನಡೆದ ಸಂದರ್ಭಗಳಲ್ಲಿ ಕೂಡಲೇ ಹಿರಿಯ ಅಧಿಕಾರಿಗಳು ಸೇರಿದಂತೆ ತೀವ್ರವಾಗಿ ಸ್ಪಂಧಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.
- ಅಪರಾಧ ನಡೆದಾಗ ಸ್ಥಳಕ್ಕೆ soco ಅಧಿಕಾರಿಗಳಿಂದ ಸೂಕ್ಷ್ಮ /ಅತೀ ಸೂಕ್ಷ್ಮ ಸಾಕ್ಷ್ಯಾಧಾರಗಳನ್ನು ಸಂಗ್ರಹಣೆ ಮಾಡಿ ಪ್ರಕರಣಗಳಿಗೆ ಸೂಕ್ತ ಬಲ ನೀಡಲಾಗುತ್ತಿದೆ.
- ಸುಸಜ್ಜಿತ ಎಫ್.ಎಸ್.ಎಲ್.ಗಳಿಂದ ಬೇಗನೆ ವರದಿ ಪಡೆದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಬೇಗನೇ ಸಲ್ಲಿಸುತ್ತಿರುವುದರಿಂದ, ಘೋರ ಅಪರಾಧಗಳಲ್ಲಿ ಆರೋಪಿತರಿಗೆ ಬೇಗನೇ ಬೇಲ್ ಸಿಗದಂತೆ ಮಾಡಲಾಗುತ್ತಿದೆ.
- ಪ್ರತಿದಿನ ಬೆಳಿಗ್ಗೆ 9 ರಿಂದ 11 ಗಂಟೆವರೆಗೆ ಹಾಗೂ ಸಾಯಂಕಾಲ 6 ರಿಂದ 9ರವರೆಗೆ ಫೂಟ್ ಪೆಟ್ರೋಲಿಂಗ್ ಮಾಡಿ ಜನನಿಬಿಡ ಸ್ಥಳಗಳಲ್ಲಿ ವಿಶೇಷವಾಗಿ ಮಹಿಳೆ ಮತ್ತು ಮಕ್ಕಳಿಗೆ ಸುರಕ್ಷತೆ ನೀಡಲಾಗುತ್ತಿದೆ.
- ಬೆಂಗಳೂರು ಸೇರಿದಂತೆ ಮುಖ್ಯ ನಗರಗಳಲ್ಲಿ ಸರ್ಕಾರದ ವತಿಯಿಂದ ಸಿಸಿಟಿವಿ ಗಳನ್ನು ಅಳವಡಿಸಿದ್ದು ಅಪರಾಧ ತಡೆ ಹಾಗೂ ಅಪರಾಧ ಪತ್ತೆಗೆ ನೆರವಾಗುತ್ತಿದೆ.
- ಪಬ್ಲಿಕ್ ಸೆಫ್ಟಿ ಅಕ್ಟ್‌ನಡಿ ರಾಜ್ಯದಲ್ಲಿ ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲು ಕ್ರಮಕೈಗೊಂಡಿದ್ದು ಅವುಗಳ ನೆಟ್‌ವರ್ಕ್ ಮ್ಯಾಪಿಂಗ್ ಮಾಡಿ ಅಪರಾಧ ಪತ್ತೆ ಮಾಡಲಾಗುತ್ತಿದೆ.
- ಪೀಕ್ ಅವರ್ಸ್‌ನಲ್ಲಿ ಜನ ನಿಬಿಡ ಕ್ಷೇತ್ರಗಳಲ್ಲಿ ರಾಣಿ ಚೆನ್ನಮ್ಮ ಪಡೆ ನೇಮಿಸಿ ಮಹಿಳಾ ಸುರಕ್ಷತೆಗೆ ಕ್ರಮ ವಹಿಸಲಾಗುತ್ತಿದೆ.
- ಸೈಬರ್ ಕ್ರೈಂಗಳನ್ನು ತಡೆಯುವ ನಿಟ್ಟಿನಲ್ಲಿ ವ್ಯಾಪಕವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ.
- ಸೈಬರ್ ಕ್ರೈಂಗಳನ್ನು ಪತ್ತೆ ಮಾಡಲು ರಾಜ್ಯದ ಎಲ್ಲಾ ಸೆನ್ ಪಿ.ಎಸ್.ಗಳಿಗೆ ಸುಸಜ್ಜಿತ ಸಲಕರಣೆಗಳನ್ನು ನೀಡಲಾಗಿದೆ.
- ಸೈಬರ್ ಕ್ರೈಂ ಪತ್ತೆ ಮಾಡುವ ಸಾಮರ್ಥ್ಯ ವೃದ್ಧಿಗಾಗಿ ರಾಜ್ಯದ ಶೇಕಡ 50% ಸಿಬ್ಬಂದಿಗೆ ತರಬೇತಿ ನೀಡುವುದನ್ನು ಆರಂಭಿಸಲಾಗಿದೆ.
- ಮೊಬೈಲ್ ಕಳ್ಳತನ ಪ್ರಕರಣಗಳಲ್ಲಿ ಸಿಇಟಿಆರ್ ಪೋರ್ಟಲ್ ಬಳಸಿ ಮೊಬೈಲ್ ಬ್ಲಾಕ್ ಮತ್ತು ಪತ್ತೆ ಕಾರ್ಯ ನಿರ್ವಹಿಸಲಾಗುತ್ತಿದೆ.
- ಶಾಲೆ ಕಾಲೇಜುಗಳಲ್ಲಿ ಪೋಸ್ಕೋ, ಬಾಲ್ಯ ವಿವಾಹಗಳ ಬಗ್ಗೆ ವ್ಯಾಪಕ ಅರಿವು ಮೂಡಿಸಲಾಗುತ್ತಿದೆ.
- ಶಾಲಾ ಕಾಲೇಜುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೂಕ್ತ ನಿಗಾ ಮಾಡಿ ತಂಬಾಕು ಮತ್ತಿತರ ಪದಾರ್ಥಗಳ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ.
- ನಿಯಮಿತವಾಗಿ ಶಾಂತಿ ಸಭೆಗಳನ್ನು ಮಾಡಿ ಸಮಾಜದಲ್ಲಿ ಶಾಂತಿ ಕಾಪಾಡಲಾಗುತ್ತಿದೆ.
- ಎಲ್ಲಾ ಜಿಲ್ಲೆಗಳಲ್ಲಿ ಸೋಷಿಯಲ್ ಮಿಡಿಯಾ ಮಾನಿಟರಿಂಗ್ ಸೆಲ್‌ಗಳನ್ನು ಸ್ಥಾಪಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ, ದ್ವೇಷದ ಪೋಸ್ಟ್‌ಗಳನ್ನು ಹಾಕುವವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮಕೈಗೊಳ್ಳಲಾಗುತ್ತಿದೆ.

**ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯಲು ಪೋಲೀಸ್ ಇಲಾಖೆಯ ವತಿಯಿಂದ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ಕೈಗೊಂಡಿರುವ ಮುಂಜಾಗ್ರತ ಹಾಗೂ ಸುಧಾರಿತ ಕ್ರಮಗಳು ಈ ಕೆಳಕಂಡಂತಿದೆ:-**

- ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ 1091, 22943225 ಕಾರ್ಯ ನಿರ್ವಹಿಸುತ್ತಿದ್ದು, ಸ್ಪಂದನ ಸಹಾಯವಾಣಿಯು ಸಹ ಸ್ಥಾಪಿಸಿ ಕಾರ್ಯನಿರ್ವಹಿಸಲಾಗುತ್ತಿದೆ.
- ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಮತ್ತು "112" ಗಸ್ತುವಾಹನಗಳು ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ರಾಜ್ಯದ ಇತರೆ ಜಿಲ್ಲೆಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬವ್ವ ಪಡೆ, ಬೀದರ್ ಜಿಲ್ಲೆಯಲ್ಲಿ ರಾಣಿ ಚನ್ನಮ್ಮ ಪಡೆ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬಿಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ.
- ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿ ಯವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್‌ಗಳು, ಮಾಲ್ ಮುತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.

**ಬೆಂಗಳೂರು ನಗರದಲ್ಲಿ "ಸೇಫ್ ಸಿಟಿ ಫಾರ್ ಸೇಫ್ಟಿ ಆಫ್ ವುಮೆನ್" ಯೋಜನೆಯಡಿ ಮಹಿಳೆಯರ ಸುರಕ್ಷತೆಯ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-**

- ನಗರದ 1640 ಸ್ಥಳಗಳಲ್ಲಿ ಒಟ್ಟು 4100 ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.
- ವಿವಿಧ ಸ್ಥಳಗಳಲ್ಲಿ ಒಟ್ಟು 30 ಸೇಫ್ಟಿ ಐಲ್ಯಾಂಡ್‌ಗಳನ್ನು ಗುರುತಿಸಲಾಗಿದೆ.
- ಒಂದು ಮೊಬೈಲ್ ಕಮಾಂಡ್ ಅಂಡ್ ಕಂಟ್ರೋಲ್ ವಾಹನ ಖರೀದಿಸಿದ್ದು, ಇದಕ್ಕೆ ಅಗತ್ಯವಿರುವ ಫ್ಯಾಬ್ರಿಕೇಷನ್ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.
- ಒಟ್ಟು 400 ಬಾಡಿ ವೋರ್ನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ.
- ವಿವಿಧ ಸ್ಥಳಗಳಲ್ಲಿ 96 ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವು ಕಾರ್ಯನಿರ್ವಹಣೆಯಲ್ಲಿವೆ.
- 8 ಡ್ರೋನ್ ಕ್ಯಾಮೆರಾಗಳನ್ನು ಖರೀದಿಸಿ ಬಳಸಲಾಗುತ್ತಿದೆ.

- ರಾಜ್ಯದಲ್ಲಿ ಸೈಬರ್, ಆರ್ಥಿಕ, ಮಾದಕದ್ರವ್ಯದ ಅಪರಾಧಗಳನ್ನು ತಡೆಗಟ್ಟಲು, ರಾಜ್ಯಾದ್ಯಂತ 45 CEN ಪೊಲೀಸ್ ಠಾಣೆಗಳು ಕಾರ್ಯಾರಂಭ ಮಾಡಲಾಗಿರುತ್ತವೆ.
- ಸಿ.ಐ.ಡಿ ಘಟಕದಲ್ಲಿ ಸೈಬರ್ ಅಪರಾಧಗಳ ಪತ್ತೆ, ಅವುಗಳನ್ನು ತಡೆಗಟ್ಟುವ ವಿಧಾನಗಳ ಬಗ್ಗೆ ತರಬೇತಿ ನೀಡಲು ಸುಸಜ್ಜಿತ ತಾಂತ್ರಿಕ ಯಂತ್ರೋಪಕರಣಗಳನ್ನು ಒಳಗೊಂಡ ವಿಶೇಷ ವಿಭಾಗ CCTIRನ್ನು ರಚಿಸಲಾಗಿರುತ್ತದೆ.

**ಬೆಳಗಾವಿಯ ವಂಟಮುರಿಯಲ್ಲಿ ದಲಿತ ಮಹಿಳೆಯನ್ನು ವಿವಸ್ತ್ರಗೊಳಿಸಿ ಮರಕ್ಕೆ ಕಟ್ಟಿ ಹಲ್ಲೆ ಮಾಡಿದ ಪ್ರಕರಣ:-**

ಸದರಿ ಪ್ರಕರಣದಲ್ಲಿ ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದ ನೊಂದ ಮಹಿಳೆಗೆ ಅವರ ಮಗನು ಅದೇ ಊರಿನ ಬೇರೊಂದು ಯುವತಿಯನ್ನು ಕರೆದುಕೊಂಡು ಹೋಗಿದ್ದಾನೆಂದು ಈ ಪ್ರಕರಣದ ಆರೋಪಿಗಳೆಲ್ಲಾ ಸೇರಿಕೊಂಡು ದಿನಾಂಕ: 11.12.2023ರಂದು ಬೆಳಗಿನ ಜಾವ ಸುಮಾರು 1-00 ಗಂಟೆಯಲ್ಲಿ ಸಂತ್ರಸ್ತೆಗೆ ಅವಾಚ್ಯ ಶಬ್ದಗಳಿಂದ ಬೈದು ಬಡಿಗೆಗಳಿಂದ ಹಾಗೂ ಕಲ್ಲಿನಿಂದ ಸಂತ್ರಸ್ತೆಯ ಮನೆಗೆ ಅತಿಕ್ರಮ ಪ್ರವೇಶ ಮಾಡಿ, ಕೊಲೆ ಮಾಡುವ ಉದ್ದೇಶದಿಂದ ಅವರ ಕುತ್ತಿಗೆ ಹಿಸುಕಿ ಮೈಮೇಲಿನ ಬಟ್ಟೆಗಳನ್ನು ಹರಿದು ಬೆತ್ತಲೆ ಮಾಡಿ ಮನೆಯಿಂದ ಎಳೆದುಕೊಂಡು ಹೋಗಿ ರಸ್ತೆಯ ಪಕ್ಕದ ಲೈಟ್‌ಕಂಬಕ್ಕೆ ಕಟ್ಟಿ ಹಲ್ಲೆ ಮಾಡಿರುವುದು ಆಗಿರುತ್ತದೆ. ಸದರಿ ಘಟನೆಯ ಬಗ್ಗೆ ಮಾಹಿತಿ ತಿಳಿದ ಪೊಲೀಸರು ತ್ವರಿತಗತಿಯಲ್ಲಿ ಘಟನಾ ಸ್ಥಳಕ್ಕೆ ತೆರಳಿ ಸಂತ್ರಸ್ತೆಯನ್ನು ಆರೋಪಿತರಿಂದ ರಕ್ಷಿಸಿ ಸದರಿಯವರನ್ನು ಚಿಕಿತ್ಸೆಗಾಗಿ ಬೆಳಗಾವಿಯ ಜಿಲ್ಲಾ ಅಸ್ಪತ್ರೆಯಲ್ಲಿ ದಾಖಲು ಮಾಡಿರುತ್ತಾರೆ. ದಾಖಲಾದ ನೊಂದ ಮಹಿಳೆಯ ಹೇಳಿಕೆಯಂತೆ ಬೆಳಗಾವಿ ನಗರದ ಕಾಕತಿ ಪೊಲೀಸ್ ಠಾಣಾ ಅಪರಾಧ ಸಂಖ್ಯೆ: 760/2023 ಕಲಂ 143, 147, 148, 341, 342, 327, 324, 323, 307, 452, 427, 354ಬಿ ಸಹ ಕಲಂ 149 ಐಪಿಸಿ ರೀತ್ಯಾ ಮತ್ತು ಕಲಂ 2(ಎ) Prevention of Destruction and Loss of Property Act 1981 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

ಸದರಿ ಪ್ರಕರಣದಲ್ಲಿ ಭಾಗಿಯಾದ 13 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಸದರಿ ಪ್ರಕರಣವನ್ನು ಸರ್ಕಾರವು ಉನ್ನತ ಮಟ್ಟದ ತನಿಖೆಗಾಗಿ ಈಗಾಗಲೇ ಸಿಐಡಿಗೆ ವಹಿಸಲಾಗಿದ್ದು, ದಿನಾಂಕ:07/02/2024 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರು ಸಂತ್ರಸ್ತೆಯವರ ರಕ್ಷಣೆಗಾಗಿ ಸೂಕ್ತ ಭದ್ರತೆಯನ್ನು ಕಲ್ಪಿಸಿರುತ್ತಾರೆ ಹಾಗೂ ಮಾನ್ಯ ಉಚ್ಛ ನ್ಯಾಯಾಲಯ, ಕರ್ನಾಟಕ, ಬೆಂಗಳೂರು ರವರ ದಿನಾಂಕ: 12.12.2023ರ ಮಧ್ಯಂತರ ಆದೇಶದನ್ವಯ ಸಂತ್ರಸ್ತೆಯ ಗುರುತನ್ನು ಯಾವುದೇ ಮಾಧ್ಯಮಗಳಿಗೆ ಬಿಡುಗಡೆ ಮಾಡದಂತೆ ಕ್ರಮ ಕೈಗೊಂಡಿರುತ್ತಾರೆ ಹಾಗೂ ಸದರಿ ಘಟನೆಗೆ ಸಂಬಂಧಿಸಿದಂತೆ ಸತ್ಯಾಶೋಧನ ಸಮಿತಿಯು ನೀಡಿದ ನಿರ್ದೇಶನಗಳನ್ವಯ ಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ ಹಾಗೂ ಘಟನೆಗೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿ ಅನ್ವಯ ರಾಷ್ಟ್ರೀಯ ಮಹಿಳಾ ಆಯೋಗವು ಸ್ವಯಂ ಪ್ರೇರಿತವಾಗಿ ವಿಚಾರಣೆ ಮಾಡಿದ್ದು, ಈ ಘಟನೆಗೆ ಕಾರಣವಾದ ಸಂಗತಿಗಳು ಹಾಗೂ ಸಂದರ್ಭಗಳ ಕುರಿತು ನೀಡಿದ ವರದಿ ಅನ್ವಯ ಕ್ರಮ ಕೈಗೊಂಡಿರುತ್ತಾರೆ.

19/02/1
SLNo: 01
59 Conv 72

ನೊಂದ ಮಹಿಳೆಗೆ ಜಿಲ್ಲಾ ಕಾನೂನು ಪ್ರಾಧಿಕಾರದಿಂದ ರೂ.50,000/- ಹಾಗೂ ಸರ್ಕಾರದ ವತಿಯಿಂದ ರೂ.5 ಲಕ್ಷ ಮತ್ತು 2 ಎಕರೆ ಜಮೀನನ್ನು ಪರಿಹಾರವಾಗಿ ನೀಡಲಾಗಿರುತ್ತದೆ.

ಈ ಘಟನೆಯ ಹಿನ್ನೆಲೆಯಲ್ಲಿ ಒಬ್ಬ ಅಧಿಕಾರಿಯ ಮೇಲೆ ಕರ್ತವ್ಯ ಲೋಪ ಆರೋಪದಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

**ಹಾವೇರಿ ಜಿಲ್ಲೆಯಲ್ಲಿ ನಡೆದ ನೈತಿಕ ಪೊಲೀಸ್‌ಗಿರಿ ಹಾಗೂ ಮಹಿಳೆಯ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣ:-**

ಹಾವೇರಿ ಜಿಲ್ಲೆಯ ಹಾನಗಲ್ ಪೊಲೀಸ್ ಠಾಣಾ ವ್ಯಾಪ್ತಿಯ ನಾಲ್ಕರ ಕ್ರಾಸ್‌ನಲ್ಲಿರುವ ಈಡಿಗ ಲಾಡ್ಜ್‌ನಲ್ಲಿ ದಿನಾಂಕ:08.01.2024ರಂದು ಮಧ್ಯಾಹ್ನ ಸುಮಾರು 02-00 ಗಂಟೆಗೆ ಈ ಪ್ರಕರಣದ ಆರೋಪಿತರು ಅತಿಕ್ರಮ ಪ್ರವೇಶ ಮಾಡಿ ಲಾಡ್ಜ್‌ನಲ್ಲಿ ವಾಸವಾಗಿದ್ದ ಪ್ರಕರಣದ ಸಂತ್ರಸ್ತ ಯುವತಿ ಹಾಗೂ ಇನ್ನೊಬ್ಬ ವ್ಯಕ್ತಿಗೆ ಹಲ್ಲೆ ಮಾಡಿ ನಂತರ ಸಂತ್ರಸ್ತೆಯನ್ನು ಎಳೆದಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ದೂರಿನ ಮೇರೆಗೆ ಹಾನಗಲ್ ಪೊಲೀಸ್ ಠಾಣಾ ಅಪರಾಧ ಸಂಖ್ಯೆ: 12/2024 ಕಲಂ 143, 147, 448, 323, 354, 354ಬಿ, 504, 506 ಸಹ ಕಲಂ 149 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

ಸದರಿ ಪ್ರಕರಣದಲ್ಲಿ ನೊಂದ ಮಹಿಳೆಯ ಹೇಳಿಕೆಯನ್ನು ಮಹಿಳಾ ಪಿಎಸ್‌ಐ ಶಿಗ್ಗಾಂವ್ ಠಾಣೆ ರವರ ಮೂಲಕ ದಾಖಲಿಸಿಕೊಂಡಿದ್ದು, ಪ್ರಕರಣದ ನೊಂದ ಯುವತಿಯ ಹೇಳಿಕೆಯನ್ನು ಕಲಂ 164 ಸಿಆರ್‌ಪಿಸಿ ಅಡಿಯಲ್ಲಿ ಮಾನ್ಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ (ಹಿ.ವಿ) ರವರ ಮುಂದೆ ದಾಖಲಿಸಿ, ಹೇಳಿಕೆ ಅನುಸಾರ ಕಲಂ 376(ಡಿ) ಐಪಿಸಿಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಾಕ್ಷಾಧಾರಗಳನ್ನು ಸಂಗ್ರಹಿಸಲಾಗಿರುತ್ತದೆ ಹಾಗೂ ಈ ಪ್ರಕರಣದಲ್ಲಿ ಅತ್ಯಾಚಾರ ನಡೆಸಿದ 07 ಜನ ಹಾಗೂ ಹಲ್ಲೆ ನಡೆಸಿದ 12 ಜನ, ಒಟ್ಟು ಎಲ್ಲಾ 19 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಶೀಘ್ರವೇ ಅಂತಿಮ ವರದಿಯನ್ನು (ಚಾರ್ಜ್‌ಶೀಟ್) ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ಈ ಘಟನೆಯ ಹಿನ್ನೆಲೆಯಲ್ಲಿ 03 ಜನ ಅಧಿಕಾರಿಗಳ ಮೇಲೆ ಕರ್ತವ್ಯ ಲೋಪ ಆರೋಪದಡಿಯಲ್ಲಿ ಕ್ರಮ ಕೈಗೊಳ್ಳಲಾಗಿರುತ್ತದೆ.

HD 13 SDN 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು